ಪ್ರಜಾವಾಣಿ

# ವಾರ್ಸಿಟಿ ಕ್ರಿಕೆಟ್: ಸಮರ್ಥ್ ಶತಕ, ಮುಂಬೈಗೆ 336 ರನ್ ಗುರಿ

**ಪ್ರಜಾವಾಣಿ ವಾರ್ತೆ**

ಮಣಿಪಾಲ: ಸಮರ್ಥ್ ರವಿ ಕುಮಾರ್ ಅವರ ಅಜೇಯ 123 ರನ್ ಹಾಗೂ ನಾಯಕ ಕೌನೈನ್ ಅಬ್ಬಾಸ್ ಅವರ ಅರ್ಧ ಶತಕದ ನೆರವಿನಿಂದ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡವು ರೋಹಿಂಟನ್ ಬಾರಿಯಾ ಟ್ರೋಫಿ ಅಖಿಲ ಭಾರತ ಅಂತರ ವಲಯ ವಿ.ವಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ವಿ.ವಿ.ಗೆ 336 ರನ್‌ಗಳ ಸವಾಲು ಒಡ್ಡಿದೆ.

ಮಣಿಪಾಲ ವಿ.ವಿ ಮೈದಾನದಲ್ಲಿ ಶನಿವಾರ ಆರಂಭಗೊಂಡ ಎರಡು ದಿನಗಳ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಜೈನ್ ವಿ.ವಿ 7 ವಿಕೆಟ್‌ಗೆ 335 ರನ್ ಗಳಿಸಿತು. ದಕ್ಷಿಣ ವಲಯ ಅಂತರ ವಿ.ವಿ ಟೂರ್ನಿಯಲ್ಲಿ ಮದ್ರಾಸ್ ವಿ.ವಿ ಎದುರಿನ ಫೈನಲ್ ಪಂದ್ಯದಲ್ಲಿ ಮಾಡಿದ ತಪ್ಪು ಮರುಕಳಿಸುವುದಕ್ಕೆ ಜೈನ್ ವಿ.ವಿ ಆಟಗಾರರು ಅವಕಾಶ ನೀಡಲಿಲ್ಲ. ಆರಂಭದ 35 ಓವರ್‌ಗಳವರೆಗೆ ಲೆಗ್ ಸೈಡ್‌ನಲ್ಲಿ ಫೈನ್ ಲೆಗ್ ಹಾಗೂ ಸ್ಕ್ವೇರ್ ಲೆಗ್ ನಡುವೆ ಒಬ್ಬ ಫೀಲ್ಡರ್ ಇದ್ದುದು ಹೊರತುಪಡಿಸಿ ಉಳಿದ ಎಲ್ಲ ಫೀಲ್ಡರ್‌ಗಳು ಆಫ್ ಸೈಡ್‌ನಲ್ಲಿ ಕೋಟೆ ಕಟ್ಟಿದ್ದರು. ಹೀಗಾಗಿ, ಎದುರಾಳಿಯ ಕರಾರುವಾಕ್ಕಾದ ಬೌಲಿಂಗ್‌ನಲ್ಲಿ ಜೈನ್ ವಿ.ವಿ ಬ್ಯಾಟ್ಸ್‌ಮನ್‌ಗಳು ಒಂಟಿ ರನ್ ಗಳಿಸುವುದಕ್ಕೂ ಕಷ್ಟಪಡಬೇಕಾಯಿತು. ಪಿಚ್‌ನ ಗುಣಗಳನ್ನು ನೋಡಿಕೊಂಡು ರೂಪಿಸಿದ ಯೋಜನೆಯಂತೆಯೇ ಬ್ಯಾಟ್ಸ್‌ಮನ್ ಎಚ್ಚರಿಕೆಯ ಆಟ ಆಡಿದರು. ಅವರು ಅನಗತ್ಯವಾಗಿ ಬಿರುಸಿನ ಹೊಡೆತಕ್ಕೆ ಮುಂದಾಗದೆ ನಿಧಾನವಾಗಿ ತಂಡದ ಮೊತ್ತವನ್ನು ಹೆಚ್ಚಿಸುತ್ತಾ ಸಾಗಿದರು.

ಜೈನ್ ವಿ.ವಿ ತಂಡವು ಮೊದಲ ವಿಕೆಟನ್ನು ಆರಂಭದಲ್ಲೇ ಕಳೆದುಕೊಂಡಿತು. ತಂಡವು ಏಳು ರನ್ ಗಳಿಸಿದ್ದಾಗ ಗೌರವ್ ಗೋಯಲ್ ಅವರು ಪ್ರತೀಕ್ ಧಾಬೋಲ್ ಅವರ ಎಸೆತದಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು. ಆದರೆ ಶಶೀಂದ್ರ 38 ರನ್ ಹಾಗೂ ಲಿಯಾನ್ ಖಾನ್ 46 ರನ್ ಗಳಿಸುವ ಮೂಲಕ ತಂಡವನ್ನು ಆಧರಿಸಿದರು. ನಾಯಕ ಕೌನೈನ್ ಅಬ್ಬಾಸ್ ಜವಾಬ್ದಾರಿಯುತವಾಗಿ ಆಡಿ ಅರ್ಧಶತಕ ಬಾರಿಸಿದರು.

ಕಳೆದ ವರ್ಷ ಕರ್ನಾಟಕದ 19 ವರ್ಷದೊಳಗಿನವರ ತಂಡವನ್ನು ಮುನ್ನಡೆಸಿದ ಅನುಭವಿ ಸಮರ್ಥ್ ಅವರು ತಂಡವು 110 ರನ್ನಿಗೆ ಮೂರು ವಿಕೆಟ್ ಕಳೆದುಕೊಂಡಿದ್ದಾಗ ಕ್ರೀಸಿಗಿಳಿದರು. 90 ಓವರ್‌ಗಳ ಪೈಕಿ ಆಗಿನ್ನೂ ಅರ್ಧಕ್ಕಿಂತಲೂ ಹೆಚ್ಚು ಓವರ್‌ಗಳು ಬಾಕಿ ಇದ್ದವು. ಯಾವುದೇ ತಪ್ಪು ಹೊಡೆತಗಳಿಗೆ ಮುಂದಾಗದ ಅವರು 151 ಎಸೆತಗಳನ್ನು ಎದುರಿಸಿ ತಾಳ್ಮೆಯಿಂದ 123 ರನ್‌ಗಳ (7 ಬೌಂಡರಿ) ಸೊಗಸಾದ ಇನ್ನಿಂಗ್ಸ್ ಕಟ್ಟಿದರು. ಎದುರಾಳಿ ಬೌಲರ್‌ಗಳು ಪಿಚ್‌ನಲ್ಲಿ ಉತ್ತಮ ಲಯ ಕಂಡುಕೊಂಡಿದ್ದರಿಂದ ರನ್ ಗಳಿಸುವುದು ಸುಲಭದ ಮಾತಾಗಿರಲಿಲ್ಲ. ಮುಂಬೈ ತಂಡದ ವೇಗದ ಬೌಲರ್‌ಗಳ ಹಾಗೂ ಸ್ಪಿನ್ನರ್‌ಗಳ ಉತ್ತಮ ಎಸೆತಗಳಿಗೆ ಗೌರವ ನೀಡುತ್ತಲೇ ಸಾಗಿದ ಸಮರ್ಥ್ ಕಳಪೆ ಎಸೆತಗಳನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಿದರು. ಅವರ ಅರ್ಧ ಶತಕ ಪೂರೈಸಿದಾಗ ಗಳಿಸಿದ್ದುದು ಕೇವಲ ಒಂದು ಬೌಂಡರಿ. ಅವರ ತಾಳ್ಮೆಯ ಮಟ್ಟ ಎಷ್ಟಿತ್ತು ಎಂಬುದಕ್ಕೆ ಇದು ಸಾಕ್ಷಿ. ಜೈನ್ ವಿ.ವಿಯನ್ನು ಕಡಿಮೆ ಮೊತ್ತಕ್ಕೆ ಕಟ್ಟಿ ಹಾಕುವ ಎದುರಾಳಿ ಬೌಲರ್‌ಗಳ ಯೋಜನೆ ಫಲಿಸುವುದಕ್ಕೆ ಸಮರ್ಥ್ ಅವಕಾಶ ನೀಡಲಿಲ್ಲ. ಅವರು ನಿಹಾಲ್ ಉಳ್ಳಾಲ್ (26) ಜತೆ ಸೇರಿ ಏಳನೇ ವಿಕೆಟ್‌ಗೆ 69 ರನ್ ಪೇರಿಸಿದರು.

ಉತ್ತರ ವಲಯದ ರನ್ನರ್ ಅಪ್ ತಂಡವಾದ ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯ ವಿ.ವಿ ತಂಡವು ಗ್ವಾಲಿಯರ್‌ನ ಜಿವಾಜಿ ವಿ.ವಿ ತಂಡವನ್ನು 85 ರನ್‌ಗಳಿಂದ ಸೋಲಿಸಿ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆಯಿತು.

ಸ್ಕೋರುಗಳು: ಮಣಿಪಾಲ ವಿ.ವಿ ಮೈದಾನ: ಜೈನ್ ವಿ.ವಿ ಬೆಂಗಳೂರು 90 ಓವರ್‌ಗಳಲ್ಲಿ 7 ವಿಕೆಟ್‌ಗೆ 335 (ಶಶೀಂದ್ರ 38, ಸಮರ್ಥ್ ರವಿಕುಮಾರ್ ಅಜೇಯ 123, ಕೌನೈನ್ ಅಬ್ಬಾಸ್ 50, ಲಿಯಾನ್ ಖಾನ್ 46, ನಿಹಾಲ್ ಉಳ್ಳಾಲ್ 26, ಮಜೀದ್ 15, ಕೆ.ಸಿದ್ಧಾರ್ಥ್ 12. ವಿನೀತ್ 89ಕ್ಕೆ 3).

ಎಂಐಟಿ ಮೈದಾನ: ಜಾಮಿಯಾ ಮಿಲಿಯಾ ಇಸ್ಲಾಮಿಯ ವಿ.ವಿ ದೆಹಲಿ 50 ಓವರ್‌ಗಳಲ್ಲಿ 5 ವಿಕೆಟ್ 272 (ಸುರೀಂದರ್ ದಹಿಯಾ ಅಜೇಯ 91, ಅಮಿತ್ ವರ್ಮ 33, ಮಾಯಾಂಕ್ ವಸಿಷ್ಠ 28, ಶಿವೇಂದ್ರ ಪಾಲ್ 39, ಶಿವಂ ಶರ್ಮ 28). ಜಿವಾಜಿ ವಿ.ವಿ ಗ್ವಾಲಿಯರ್ 46.4 ಓವರ್‌ಗಳಲ್ಲಿ 187ಕ್ಕೆ ಆಲೌಟ್ (ಸನತ್ ಗುರ್ಜರ್ 23, ಭರತ್ ಅನಂತ್ 46, ಸೊಹ್ರಾಬ್ ಧಲಿವಾಲ್ 42. ಅಭಯ್ ನೇಗಿ 27ಕ್ಕೆ 2, ಆಶಿಶ್ ಚೋಪ್ರಾ 13ಕ್ಕೆ2)